**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ–238/2018**

| | | |
|---|---|---|
| ಸಾಕ್ಷಿದಾರರ ಹೆಸರು | : ರಾಘವೇಂದ್ರ ಭಟ್ಟ | ಪಿ.ಡಬ್ಲೂಃ 3 |
| ತಂದೆಯ /ಗಂಡನ ಹೆಸರು | : ಕೃಷ್ಣ ಭಟ್ಟ | ಸಿ.ಡಬ್ಲೂಃ 4 |
| ವಯಸ್ಸು | : 30 ವರ್ಷ | |
| ಉದ್ಯೋಗ | : ಉಪನ್ಯಾಸಕರು | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 15.02.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ– ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನನ್ನ ಸ್ವಂತ ಊರು ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆಯಲ್ಲಿದೆ. 2011–12 ನೇ ಸಾಲಿನಲ್ಲಿ ಮೈಸೂರಿಗೆ ಬಂದಿರುತ್ತೇನೆ. ಮೊದಲು ಪೌರೋಹಿತ್ಯ ಮಾಡುತ್ತಿದ್ದೆ. 2017 ರಿಂದ ಮೈಸೂರಿನ ಜ್ಞಾನೋದಯ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

1. ಚಾ.ಸಾ. 1 ನನಗೆ ಗೊತ್ತು. ಅವರೂ ಸಹ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನವರು. ಅವರು ಪೌರೋಹಿತ್ಯ ಮಾಡುತ್ತಾರೆ. ಹೀಗಾಗಿ ನನಗೆ ಅವರ ಪರಿಚಯ ಇರುತ್ತದೆ. ಅವರಿಗೆ ಮದುವೆ ಆಗಿತ್ತು. ಅವರ ಹೆಂಡತಿಯ ಹೆಸರು ಆಶಾ ಎಂದಿರಬಹುದು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಆತ ನನ್ನ ದೂರದ ಸಂಬಂಧಿ . ಆತ ಯಲ್ಲಾಪುರದ ವಾಸಿ . ನನಗೆ ತಿಳಿದ ಹಾಗೆ ಆತ ಮೈಸೂರಿನಲ್ಲಿ ವಾಸವಾಗಿರುವುದಿಲ್ಲ.

2. ಚಾ,ಸಾ. 1 ರವರು ಎಲ್ಲಾದರು ಪೂಜೆ ಇದ್ದಾಗ ನನಗೆ ಹೇಳುತ್ತಿದ್ದರು. ಆಗ ನಾನೂ ಸಹ ಅವರೊಂದಿಗೆ ಹೋಗುತ್ತಿದ್ದೆ. ಅವರಲ್ಲಿ ಮೊಬೈಲ್ ಪೋನ್ ಇತ್ತು. ಅದರಿಂದ ನನಗೆ ಪೋನ್ ಮಾಡುತ್ತಿದ್ದರು. ಅವರ ಹೆಂಡತಿ ಈಗ ಮೃತ ಪಟ್ಟಿರುತ್ತಾರೆ. ದಿಃ 29.01.2018 ರಂದು ಆಕೆ ಮೃತ ಪಟ್ಟಿರುತ್ತಾರೆ. ಚಾ,ಸಾ. 1 ಮತ್ತು ಅವರ ಹೆಂಡತಿಯ ನಡುವೆ ಅನ್ಯೂನ್ಯತೆ ಇರಲಿಲ್ಲ ಎನ್ನುವ ಮಾಹಿತಿ ಎಲ್ಲರಿಗೂ ಗೊತ್ತಿತ್ತು. ಚಾ,ಸಾ. 1 ರವರ ಹೆಂಡತಿ ಮೃತ ಪಟ್ಟ ನಂತರ ಆಕೆಯ ತಮ್ಮ ರಮೇಶ್ ಚಾ,ಸಾ. 1 ರವರ ವಿರುದ್ಧ ವರದಕ್ಷಿಣೆ ಕಿರುಕುಳ ಕೇಸನ್ನು ಹಾಕಬಹುದು ಎಂದು ಮತ್ತು ತಾನು ಅದರಿಂದ ಪಾರಾಗಬೇಕು ಎನ್ನುವ ಉದ್ದೇಶದಿಂದ ಆರೋಪಿಯ ವಿರುದ್ಧ ಈ ಪ್ರಕರಣ ದಾಖಲಾಗುವಂತೆ ಮಾಡಿರುತ್ತಾರೆ. ಆಕೆ ಪುಡ್ ಪಾಯ್ಸನ್ ನಿಂದ ಮೃತ ಪಟ್ಟಿರುತ್ತಾರೆ ಎನ್ನುವುದು ಗೊತ್ತಾಯಿತು. ಆಕೆಯ ಮರಣದ ನಂತರ ಪೋಸ್ಟ್ ಮಾರ್ಟಂ ಮಾಡಿಸಿ ಎಂದು ನಾವೆಲ್ಲಾ ಹೇಳಿದರೂ ಸಹ ಚಾ.ಸಾ. 1 ರವರು ಮಾಡಿಸಲು ಬಿಡಲಿಲ್ಲ.

3. ನಾನು ಆ ದಿನ ಕರ್ತವ್ಯದಲ್ಲಿ ಇದ್ದೆ. ಆಗ ನನ್ನ ಸ್ನೇಹಿತ ಸತೀಶ್ ಪೋನ್ ಮಾಡಿ ಉಮಾಪತಿಯವರ ಹೆಂಡತಿ ಮೃತ ಪಟ್ಟಿರುತ್ತಾಳೆ , ಬನ್ನಿ ಎಂದು ಹೇಳಿದರು. ಆಗ ನಾನು ಬೃಂದಾವನ ಆಸ್ಪತ್ರೆಗೆ ಹೋದೆ. ಅಲ್ಲಿ ತುಂಬಾ ಜನ ಇದ್ದರು. ಎರಡೂ ಕಡೆಯ ನಂಟರಿಷ್ಟರು ಇದ್ದರು. ನಂತರ ನಾನು ವಾಪಾಸ್ಸು ಬಂದೆ. ಮುಂದೆ ಏನಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಚಾ,ಸಾ. 1 ರವರ ಹೆಂಡತಿ ಮೃತ ಪಡುವ ಒಂದು ತಿಂಗಳ ಮುಂಚೆ ಚಾ.ಸಾ. 1 ರವರು ನನಗೆ ಪೋನ್ ಮಾಡಿ ಈ ಆರೋಪಿಯ ಬಗ್ಗೆ ವಿಚಾರಿಸಿದ್ದರು. ಅಂದರೆ ಪೋನ್ ಮಾಡಿ , ಗಣೇಶ್ ಮಲವಳ್ಳಿ ಗೊತ್ತಾ ಎಂದು ಕೇಳಿದ್ದರು. ನಾನು ಯಾವ ಊರಿನ ಗಣೇಶ್ ಎಂದು ಕೇಳಿದ್ದೆ. ಆಗ ಅವರು ಮೊಬೈಲ್ ನಲ್ಲಿ ಪೋಟೋ ಕಳುಹಿಸಿದರು. ಆ ಪೋಟೋವನ್ನು ನೋಡಿ , ನಾನು ಈತ ಗೊತ್ತು. ಗಣಪತಿ ಎಂದು,

ನಮ್ಮ ಊರಿನವನೇ ಎಂದು. ಆ ಪೋಟೋ ಈ ಆರೋಪಿಯದ್ದೇ ಆಗಿತ್ತು. ನಂತರ ಅವರು , ಈ ವ್ಯಕ್ತಿ ನನ್ನ ಹೆಂಡತಿಗೆ ಮೆಸೇಜ್ ಗಳನ್ನು ಮಾಡುತ್ತಾನೆ , ಆತನ ತಂದೆ ತಾಯಿಯ ನಂಬರ್ ಇದ್ದರೆ ಕೊಡಿ , ಇಲ್ಲವಾದಲ್ಲಿ ಆತನಿಗೆ ಪೋನ್ ಮಾಡಿ ಮೆಸೇಜ್ ಮಾಡಬೇಡ ಎಂದು ಹೇಳಿ ಎಂದು ಹೇಳಿದ್ದರು. ಆಗ ನಾನು ಆರೋಪಿಯ ತಂದೆಗೆ ಪೋನ್ ಮಾಡಿ , ನಿಮ್ಮ ಮಗ ಉಮಾಪತಿ ಭಟ್ಟ ರವರ ಹೆಂಡತಿಗೆ ಮೆಸೇಜ್ ಮಾಡುತ್ತಾನಂತೆ , ಬೇಡ ಎಂದು ಹೇಳಿ ಎಂದೆ. ಆಗ ಅವರು , ನನ್ನ ಮಗ ಇಲ್ಲೇ ಇದ್ದಾನೆ , ಅವನೊಂದಿಗೆ ಮಾತನಾಡಿ ಎಂದು ಹೇಳಿ , ಪೋನ್ ನ್ನು ಆರೋಪಿಯ ಕೈಗೆ ಕೊಟ್ಟರು. ಆಗ ನಾನು ಆತನೊಂದಿಗೆ ಮಾತನಾಡಿ , 'ನೀನು ಉಮಾಪತಿ ಭಟ್ಟ ರವರ ಹೆಂಡತಿಗೆ ಮೆಸೇಜ್ ಮಾಡುತ್ತಿದ್ದೀಯಂತೆ , ಆ ರೀತಿ ಮಾಡಬೇಡ, ಕ್ಷಮೆ ಕೇಳು 'ಎಂದೆ. ಆಗ ಆರೋಪಿ 'ನಾನು ಯಾರಿಗೂ ಮೆಸೇಜ್ ಮಾಡಿಲ್ಲ , ನನ್ನ ತಪ್ಪು ಇಲ್ಲ , ನಾನು ಕ್ಷಮೆ ಕೇಳುವುದಿಲ್ಲ ' ಎಂದ. ನಂತರ ಮರು ದಿನ ಚಾ,ಸಾ. 1 ರವರು ನನಗೆ ಸಿಕ್ಕಿ ಆರೋಪಿಗೆ ಹೇಳಿದ್ದೀರಾ ಎಂದು ಕೇಳಿದರು. ಆಗ ನಾನು , ಹೌದು ಎಂದೆ.

4. ಈ ಘಟನೆ ನಡೆಯುವ 5–6 ತಿಂಗಳ ಹಿಂದೆ ಆರೋಪಿ ಮೈಸೂರಿಗೆ ಬಂದಿದ್ದ. ನಮ್ಮ ಮನೆಗೂ ಸಹ ಬಂದಿದ್ದ. ಸ್ವಲ್ಪ ಹಣ ಬೇಕು ಎಂದು ಕೇಳಿದ್ದ. ಆಗ ನಾನು 500 ರೂಗಳನ್ನು ಕೊಟ್ಟಿದ್ದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ, ಮಾನ್ಯ ಸರ್ಕಾರಿ ಅಭಿಯೋಜಕರಿಂದ**

5. ಚಾ,ಸಾ. 1 ಮತ್ತು ಆತನ ಹೆಂಡತಿಯ ನಡುವೆ ಅನ್ಯೂನ್ಯತೆ ಇರಲಿಲ್ಲ , ಗಲಾಟೆಗಳು ನಡೆಯುತ್ತಿದ್ದವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮೃತಳ ತಮ್ಮ ಚಾ,ಸಾ. 1 ರವರ ಮೇಲೆ ವರದಕ್ಷಿಣೆ ಕೇಸನ್ನು ದಾಖಲಿಸಿರುತ್ತಾರೆ ಎಂದು ಈ ಪ್ರಕರಣವನ್ನು ಆರೋಪಿಯ ವಿರುದ್ಧ ಸುಳ್ಳಾಗಿ ದಾಖಲಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ,ಸಾ. 1 ರವರು ಮೃತಳ ಪಿಎಂ ಮಾಡಿಸುವುದು ಬೇಡ ಎಂದು ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ಈ ವಿಷಯಗಳ ಬಗ್ಗೆ ಪೋಲೀಸರು ಕೇಳಿರುವುದಿಲ್ಲ , ಆದ್ದರಿಂದ ಅವರ ಮುಂದೆ ನಾನು ಹೇಳಿರುವುದಿಲ್ಲ. ಆರೋಪಿ ನನ್ನ ಸಂಬಂಧಿಕನಾಗಿರುವುದರಿಂದ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

6. ಪೋಲೀಸರು ಆರೋಪಿಯ ವಿರುದ್ಧ ಏನೆಂದು ಈ ಪ್ರಕರಣವನ್ನು ದಾಖಲಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ಪೋಲೀಸರು ಕೆಲವೊಂದು ಪ್ರಶ್ನೆಗಳನ್ನು ಕೇಳಿದ್ದರು. ಆ ಪ್ರಶ್ನೆಗಳಿಗೆ ನಾನು ಉತ್ತರಿಸಿದ್ದೆ. ನಂತರ ಸಹಿ ಹಾಕು ಹೇಳಿದ್ದರು. ಹೀಗಾಗಿ ಸಹಿ ಹಾಕಿರುತ್ತೇನೆ. ಆರೋಪಿ ತಾನು ಮೃತಳಿಗೆ ಮೆಸೇಜ್ ಮಾಡುತ್ತಿದ್ದ ಬಗ್ಗೆ ನನಗೇನು ಹೇಳಿರುವುದಿಲ್ಲ. ಆಕೆ ಮೃತ ಪಡುವ ಒಂದು ದಿನ ಮುಂಚೆ ಹೊಟ್ಟೆ ನೋವು ಎಂದು ಆಸ್ಪತ್ರೆಗೆ ಸೇರಿದ್ದ ವಿಷಯ ನನಗೆ ಗೊತ್ತಿರುವುದಿಲ್ಲ. ಆಕೆ ಲೋ ಬಿಪಿ ಯಿಂದ ಮೃತ ಪಟ್ಟಿರುತ್ತಾಳೆ ಎಂದು ವೈದ್ಯರು ವರದಿ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಮೃತ ಆಶಾ ರವರಿಗೆ ಸ್ನೇಹ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ.

ಆರೋಪಿ ಮೈಸೂರಿನಿಂದ 500 ಕಿ.ಮಿ. ದೂರದಲ್ಲಿದ್ದಾನೆ ಎನ್ನುವುದು ಸರಿ . ಚಾ,ಸಾ. 1 ಮತ್ತು ಅವರ ಹೆಂಡತಿ ಮೈಸೂರಿನಲ್ಲಿ ವಾಸ ವಿದ್ದರು ಎನ್ನುವುದು ಸರಿ.

ಮರು ವಿಚಾರಣೆಃ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.